ಇದೆ. ಆದ್ದರಿಂದ ನಾಳೆ ಶೂನ್ಯ ವೇಳೆಗೆ ಅವಕಾಶ ಮಾಡಿಕೊಡುತ್ತೇನೆ. ಏಕೆಂದರೆ ಇದೆಲ್ಲಾ ಮುಗಿದು ಹೋಗಲಿ. ಸುಮ್ಮನೆ ಅಜೆಂಡಾದಲ್ಲಿ ಮುಖ್ಯವಾದ ವಿಚಾರಗಳನ್ನು ಹಾಕಿಕೊಂಡು ಅನಂತರ ಮತ್ತೆ ಮತ್ತೆ ಅವು ಕೊನೆಯಲ್ಲಿ ರೀಚ್ ಆಗಲಿಲ್ಲ ಎಂದು ಹೇಳುವುದು ಸರಿಯಾಗುವುದಿಲ್ಲ. ಸುಮಾರು 20 ಜನ ಕಳುಹಿಸಿದ್ದಾರೆ, ಆದ್ದರಿಂದ ನಾಳೆ ಶೂನ್ಯ ವೇಳೆಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಿಮ್ಮ ನಾಯಕರೆಲ್ಲ ಒಪ್ಪಿಕೊಳ್ಳುತ್ತಿದ್ದಾರೆ, ನಾನು ಹೇಳಿದ್ದೇನೆ, ನೂತನಸದಸ್ಯರುಗಳು ನೀವು ಸುಮ್ಮನೆ ಹೀಗೆ ನಿಂತುಕೊಂಡು ಬಿಟ್ಟರೆ ಹೇಗೆ? ಮಾನ್ಯ ಬಂಗೇರರವರೇ, ತಮ್ಮ ಹೆಸರಿನ ಮುಂದಿರುವ ಅರ್ಜಿಯನ್ನೊಪ್ಪಿಸಿ.

5. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಆಸ್ತಿ ವಿಭಾಗ ಮಾಡುವಾಗ ಅನುಸರಿಸುವ "ಶಾಶ್ವತ ಹಿಸ್ಸೆ" ಪದ್ಧತಿಗೆ ಕಡಿವಾಣ ಹಾಕುವ ಬಗ್ಗೆ ಸದನಕ್ಕೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಯಿತು.

12.40 ಪಿಎಂ

6. ವಿತ್ತೀಯ ಕಾರ್ಯಕಲಾಪಗಳು

ಶ್ರೀ ಸಿದ್ದರಾಮಯ್ಯ (ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, "2004–05ನೇ ಸಾಲಿನ ಪೂರಕ ಅಂದಾಜುಗಳ(ಮೊದಲನೇ ಕಂತು)ನ್ನು ಮಂಡಿಸುತ್ತಿದ್ದೇನೆ"

ಪ್ರಸ್ತಾಪ ಮಂಡಿಸಲ್ಪಟ್ಟಿತು ಅನುಬಂಧ

SUPPLEMENTARY ESTIMATES 2004-2005 (FIRST INSTALMENT)

INTRODUCTORY NOTE

Article 205(1) of the Constitution of India provides that if the amount authorized by the Appropriation Act to be expanded for a particular service for the currecnt year is found to be insufficient for the purpose of that year or when a need has arisen during the current financial year for Supplementary or Additional expenditure upon some ``New Service'' not contemplated in the Annual Financial Statement for the year, another statement showing the estimated amount of the expenditure shall be laid before the Legislature of the State.

2. In accordance with the aforesaid provision of the Constitution, Supplimentary Estimates aggregating to Rs. 7336.58 lakhs are laid before the Houses of the State Legislature. This Estimates relates to Advances sanctioned from the Contingency Fund to cover expenditure on ``New Service'' during 2004-2005 after the Budget was placed before the Legislature in February, 2004

3. A Statement showing the advances sanctioned from the contingency fund and included in the Supplemantary Estimates now placed before the Legislature is given as Annexure.

4. Of the total sum of Rs. 7336.58 lakhs included in the Supplementary Estimates, a sum of Rs. 2432.07 lakhs is covered by Central Assistance and Rs. 397.58 lakhs is covered by Receipts. The net outgo of cash is Rs. 4506.93 lakhs.

SUPPLYMENTARY ESTIMATES 2004-2005 (First Instalment)

Demand No.	Service and Purpose		Amount (Rs. in lakhs) Charged	Voted	Total
01	Agriculture & Horticulture	Revenue	25.00		25.00
02	Animal Husbandry & Fisheries	Capital	100.00		100.00
03	Finance	Revenue	524.79		524.79
05	Home & Transport	Revenue	200.00		200.00
07	Rural Development & Panchayath Raj	Revenue	2091.10		2091.10
08	Forest, Ecology & Environment	Revenue	150.00		150.00
11	Women & Child Development	Revenue	1691.72		1691.72
13	Food & Civil Supplies	Revenue	500.00		500.00
14	Revenue	Revenue	249.83		249.83
17	Education	Revenue	500.00		500.00
18	Commerce & Industries	Revenue	240.56		240.56
21	Water Resources	Capital	247.58		247.58
23	Labour	Revenue	646.00		646.00
25	Kannada & Culture	Revenue	85.00		85.00
26	Planning, Statistcs, Science & Technology	Revenue	35.00		35.00
27	Law	Revenue	50.00		50.00
	Total	**Revenue**	**6989.00**		**6989.00**
		Capital	**347.58**		**347.58**
	GRAND TOTAL		**7336.58**		**7336.58**

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗು ಹಣಕಾಸು ಸಚಿವರು ಈಗ ತಾನೇ 2004–05ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು)ನ್ನು ಮಂಡಿಸಿದ್ದಾರೆ. ಇದನ್ನು ನಾವು ನೋಡಬೇಕು. ಇದರಿಂದ ಬಹಳಷ್ಟು ಸಂಗತಿಗಳು ಉದ್ಭವವಾಗಿವೆ. ಸನ್ಮಾನ್ಯ ಸಿದ್ದರಾಂಯ್ಯನವರು ಮಂಡಿಸಿದ ಬಜೆಟ್ ಹಾಗೂ ಪೂರಕ ಅಂದಾಜುಗಳು ಒಂದಕ್ಕಂದು ಕೊಡಿಕೊಂಡಿರುವುದರಿಂದ ಇವೆರಡೂ ಸೇರಿದಂತೆ ಚರ್ಚೆಯಾಗಬೇಕಾಗುತ್ತದೆ. ನಾಳೆ ಇದನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳಿ. ಇವೊತ್ತು 2–3– ಪ್ರಮುಖ ವಿಷಯಗಳಿದ್ದು, ಮಹತ್ವವಿದ್ದು. ಭೂ ಹಗರಣ ಕುರಿತಾದ ಚರ್ಚೆ ಒಂದಲ್ಲ ಒಂದು ಕಾರಣಕ್ಕಾಗಿ ಮುಂದೆ ಹೋಗುತ್ತಿದೆ. ಇನ್ನೂ ಅನೇಕ ಪ್ರಮುಖ ವಿಷಯಗಳಿವೆ. ಆದಕಾರಣ, ಈ ಕುರಿತಾದ ವಿಶೇಷ ಚರ್ಚೆಗೆ ನಾಳೆ ಅವಕಾಶ ಕಲ್ಪಿಸಿಕೊಡಿ. ನಾವು ಇದನ್ನು ಅಧ್ಯಯನ ಮಾಡಿಕೊಂಡು ಬರುತ್ತೇವೆ.

ಶ್ರೀ ಸಿದ್ದರಾಮಯ್ಯ : ನೀವು ಹೇಳುವುದು ಹೇಳಿ. ಈಗಲೇ ಚರ್ಚೆ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಇನ್ನೂ ಅದನ್ನು ಓದಿಲ್ಲ ನಾವೇನು ಪರಿಣಿತರೇ? ಅದರಲ್ಲಿ ಏನಿದೆಯೆಂಬುದು ನಮಗೆ ಗೊತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಚರ್ಚೆ ಮಾಡಬೇಕೆಂದರೆ ನನ್ನದೇನೂ ತಕರಾರಿಲ್ಲ. ಮಾನ್ಯ ಅಧ್ಯಕ್ಷರೆ, ಈ ಪೂರಕ ಅಂದಾಜುಗಳನ್ನು ಸಾಮಾನ್ಯವಾಗಿ ಮಂಡಿಸಿಕೊಂಡು ಬರಲಾಗುತ್ತಿದೆ. ಬಜೆಟ್‌ನಲ್ಲಿ ಕೊಟ್ಟಿರುವ ಹಣ ಸಾಲದ ಹೋದರೆ ಅದ್ಕಕಿಂತಲೂ ಹೆಚ್ಚು ಹಣವನ್ನು ನಾವು ಖರ್ಚು ಮಾಡಿದ್ದರೆ, ಅಗತ್ಯ ಸೇವೆಗಳಿಗೆ, ಮತ್ತು ಇನ್ನಿತರ ಬೇರೆ ಬೇರೆ ಸೇವೆಗಳಿಗೆಂದು ಖರ್ಚು ಮಾಡಿದ್ದರೆ ಅದನ್ನು Legislature ಮುಂದೆ ತರುವುದಕ್ಕೆ constitutions Article 205, clause-1ರಲ್ಲಿ ಇದಕ್ಕೆ ಅವಕಾಶವಿದೆ. ಸುಮಾರು 73 ಕೋಟಿ ರೂಪಾಯಿಗಳಷ್ಟು ಹಣವನ್ನು ಹೆಚ್ಚಿಗೆ ಖರ್ಚು ಮಾಡಿರುವುದರಿಂದ ಇದಕ್ಕೆ ನೀವು ಒಪ್ಪಿಗೆ ಕೊಡಬೇಕು. ಇದಕ್ಕೆ ಚರ್ಚೆ ಏನೂ ಬೇಕಾಗಿಲ್ಲ. 73 ಕೋಟಿ ರೂಪಾಯಿಗಳಲ್ಲಿ cash flow ಆಗುವುದು 45 ಕೋಟಿ, ರೂ ಉಳಿದಂತೆ 45 ಕೋಟಿ ರೂಪಾಯಿಗಳು ಮಾತ್ರ ಕೇಂದ್ರ ಸರ್ಕಾರದಿಂದ ಬರುವ, Centrally sponsored Scheme ಇರುತದಲ್ಲಾ ಅದಕ್ಕೆ matching grant ಕೊಡುವುದಾಗಿದೆ. ಇದರ ಬಗ್ಗೆ ಚರ್ಚೆ ಅಗತ್ಯವಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಆದುದರಿಂದ, ದಯವಿಟ್ಟು ಈಗಲೇ ಇವರು ಚರ್ಚೆಯಲ್ಲಿ ಭಾಗವಹಿಸಬೇಕು. ಏನಾದರೂ ಹೇಳುವುದಿದ್ದರೆ, ಕೇಳುವುದಿದ್ದರೆ ದಯವಿಟ್ಟು ಈಗಲೇ ಕೇಳಬೇಕು. ನಿಮ್ಮ ಅಭಿಪ್ರಾಯಗಳನ್ನು ಹೇಳಬೇಕು. ಅದಕ್ಕೆ ನಾಣು ಉತ್ತರಿಸಲು ತಯಾರಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಹಿಂದೆ ಪೂರಕ ಅಂದಾಜುಗಳ ಬಗ್ಗೆ 3 ರಿಂದ 5 ಗಂಟೆಗಳಷ್ಟು ಕಾಲ ಚರ್ಚಿಸಲಾಗಿದೆ. ತಮಗೆ ಬೇಕಾಗಿರುವುದೇನೆಂದರೆ, ಪೂರಕ ಅಂದಾಜುಗಳಿಗೆ ಅನುಮೋದನೆಯಷ್ಟೆ. ಬೇರೆ ಪ್ರಶ್ನೆ ಇಲ್ಲ. ಅದಕ್ಕೆ ನಾವು ಬದ್ಧರಾಗಿದ್ದೇವೆ. ಪೂರಕ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ 73 ಕೋಟಿ ರೂಪಾಯಿಗಳ ಬಗ್ಗೆ ಮಾತ್ರ ಮಾತನಾಡುವುದಿಲ್ಲ. ಕಳೆದ ನಾಲ್ಕು ತಿಂಗಳುಗಳಿಂದ ಅಭಿವೃದ್ಧಿ ಕಾರ್ಯಗಳೆಲ್ಲವು ಸ್ಥಗಿತಗೊಂಡು ಏನೇನು ಕತೆಗಳಾಗಿವೆ? ನಿಮ್ಮ ಹಣಕಾಸಿನ ಸ್ಥಿತಿ ಏನು? ಜನರು ಸತ್ತು ಸುಣ್ಣವಾಗುತ್ತಿದ್ದಾರೆ, ಇನ್ನು ಯಾವುದಕ್ಕೂ ಪೇಮೆಂಟ್ ಆಗಿಲ್ಲ. ಇವೆಲ್ಲಾ ಸಂಗತಿಗಳನ್ನು ಮಾತನಾಡಬೇಕಾಗುತ್ತದೆ. ನೀವು ಎಷ್ಟು ಗಂಟೆಗಳ ಕಾಲ ನಿಂತು ಮಾತನಾಡಿದ್ದೀರೆಂದು ನಮಗೆ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಆದುದರಿಂದ, ನಾಳೆ ಬೆಳಿಗ್ಗೆ 2–3 ಗಂಟೆಗಳ ಚರ್ಚೆಗೆ ದಯಮಾಡಿ ಅವಕಾಶ ಕಲ್ಪಿಸಿಕೊಡಿ. ಅದನ್ನು ಒತ್ತಾಯ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಮೊನ್ನೆ ಮಂಡಿಸಿದ ಶಾಸನಗಳ ಬಗ್ಗೆಯೂ ಚರ್ಚೆಯಾಗದೆ ಏಕಾಏಕಿ ಅಂಗೀಕಾರವಾಯಿತು. ಈಗ ಪೂರಕ ಅಂದಾಜುಗಳ ಬಗ್ಗೆಯೂ ಚರ್ಚೆಯಾಗದೆ ಅಂಗೀಕಾರವಾಗುವುದು ಸರಿಯಲ್ಲ. ಪೂರಕ ಅಂದಾಜುಗಳ ಬಗ್ಗೆ ಸಮಗ್ರವಾಗಿ ನಾವು ಎಷ್ಟೇ ಹೇಳಲಿ, ತಾವು ಹೇಳುವಂತೆ ದೀರ್ಘವಾಗಿ ಚರ್ಚೆ ಮಾಡದಿದ್ದರೂ ನಾವೆಲ್ಲರೂ 5–5 ನಿಮಿಷಗಳ ಕಾಲ ಮಾತನಾಡಿದರೂ ಬಹಳ ಪ್ರಮುಖವಿಷಯಗಳನ್ನು ಪ್ರಸ್ತಾಪಿಸಬೇಕಾಗಿದೆ. ದಯಮಾಡಿ ಮಾನ್ಯ ಉಪ ಮುಖ್ಯಮಂತ್ರಿಗಳು ನಾಳೆ ಬೆಳಿಗ್ಗೆ ಚರ್ಚಿಸಲು ತಾವು ಒಪ್ಪಬೇಕು.

ಅಧ್ಯಕ್ಷರು : ಈಗಲೇ ಮಾತನಾಡಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನೀವು ಹೇಳಿದ ಪ್ರಕಾರ ನಿಮಗೆ ಬೇಕಾಗಿರುವುದೇನೆಂದರೆ, ಇನ್ನು ಳ್ಳ 31ರೊಳಗೆ ನಾವು ಪಾಸ್ ಮಾಡಿಕೊಟ್ಟಿದ್ದೇವೆ. 28 ಬೇಡಿಕೆಗಳನ್ನು ಒಂದೇ ಸಲ ಪಾಸ್ ಮಾಡಿಕೊಟ್ಟಿದ್ದೇವೆ. ಚರ್ಚೆಯಾಗದೆ ಎಲ್ಲಾ ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಿಸಿದಂತೆ ಅನುಮೋದನೆ ಪಡೆದುಕೊಂಡಿರಿ. ಇಲಾಖಾ ಬೇಡಿಕೆಗಳ ಮೇಲೆ ನಿಜವಾಗಿಯೂ ಚರ್ಚೆಯಾಗಬೇಕಿತ್ತು ಚರ್ಚೆಯಾಗಲಿಲ್ಲ. ಕನಿಷ್ಠ ಪಕ್ಷ ಪೂರಕ ಅಂದಾಜುಗಳ ಮೇಲೆ ಚರ್ಚಿಸುವುದಕ್ಕೆ ಒಮದು ಅವಕಾಶ ಕಲ್ಪಿಸಿಕೊಡುವುದಕ್ಕೆ ತೊಂದರೆಯಾದರೂ ಏನಿದೆ? ತೊಂದರೆ ಇದ್ದರೆ ಹೇಳೀ.

ಶ್ರೀ ಆರಗ ಜ್ಞಾನೇಂದ್ರ : ಪೂರಕ ಅಂದಾಜುಗಳಿಗೆ ಸಂಬಂಧಿಸಿದ ಪುಸ್ತಕವನ್ನು ಇವೊತ್ತು ಒದಗಿಸಿಕೊಟ್ಟಿದ್ದಾರೆ.

ಶ್ರೀ ಜೆ.ವಿ. ಶ್ರೀರಾಮ ರೆಡ್ಡಿ : ಪೂರಕ ಅಂದಾಜುಗಳ ಮೇಲೆ ನಾಳೆ ಚರ್ಚಿಸುವುದರಿಂದ ಸರ್ಕಾರಕ್ಕೆ ಆಗುವ ತೊಂದರೆಯಾದರೂ ಏನು. ತೊಂದರೆ ಇದ್ದರೆ ಒಪ್ಪಿಕೊಳ್ಳೋಣ. ತೊಂದರೆ ಏನೂ ಇಲ್ಲವಲ್ಲಾ.

ಶ್ರೀ ಸಿದ್ದರಾಮಯ್ಯ : ತೊಂದರೆ ಏನಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಂತ್ರಿಮಂಡಲದ ವಿಸ್ತರಣೆಗೆ ಅಡ್ಡಿಯಾಗುತ್ತದೆಂದೋ... ಈ ತಿಂಗಳ 7–8ನೇ ತಾರೀಖಿನೊಳಗೆ, ಅಥವಾ ಮುಂದಿನ ತಿಂಗಳ ಕೊನೆಯೊಳಗೆ ಮಂತ್ರಿಮಂಡಲ ವಿಸ್ತರಿಸುವುದಾಗಿ ಹೇಳಿದ್ದಾರೆ. ಅದೇನೂ ಅವಸರವಿಲ್ಲ. ಅದನ್ನು ಮತ್ತೆ ಮಾಡುತ್ತಿರಾ?

ಶ್ರೀ ಸಿದ್ದರಾಮಯ್ಯ : ಯಾವುದಕ್ಕೆ ಈ ಸದನದ ಸಮಯ ವ್ಯಯವಾಗಬೇಕೋ, ಅದಕ್ಕೆ ನನ್ನದೇನೂ ತಕರಾರಿಲ್ಲ. ಸಾರ್ವಜನಿಕರಿಗೆ ಸಂಬಂಧಿಸಿದ ವಿಚಾರ, ಸಮಸ್ಯೆಗಳ ಬಗ್ಗೆ ಚರ್ಚಿಸೋಣ. ಈಗಾಗಲೇ ಆಯವ್ಯಯ ಅಂದಾಜಿನ ಮೇಲೆ ಈಗಾಗಲೇ ದೀರ್ಘ ಚರ್ಚೆಯಾಗಿದೆ. ಈ ಕುರಿತಂತೆ ವಿರೋಧ ಪಕ್ಷದ ನಾಯಕರು ಏನೇನು ಹೇಳಬೇಕೋ, ಅದೆಲ್ಲವನ್ನೂ ಹೇಳಿದ್ದಾರೆ. ಬಜೆಟ್ ಮೇಲೆ ಚರ್ಚಿಸುವಾಗ ಎಲ್ಲಾ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. 'ಕಳೆದ ನಾಲ್ಕು ತಿಂಗಳುಗಳಲ್ಲಿ ಏನೂ ಕೆಲಸಗಳಾಗಿಲ್ಲ, ಕೆಲಸ ಸ್ಥಗಿತವಾಗಿದೆ...' ಈ ತರಹದ ಚರ್ಚೆಗಳಾಗಿವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏನು ಮಾಡಿದರೂ ನೀವೇನೂ ಅಲ್ಲಾಡಲಿಲ್ಲ, ಬಿಡಿ. ಬಜೆಟ್ ಮೇಲೆ ಚರ್ಚಿಸಿದಾಗ ನಾವು ನೀಡಿದಂಥ ಯಾವುದೇ ಸಲಹೆಗಳ ಬಗ್ಗೆಯೂ ಒಂದಿಂಚೂ ಆ ಕಡೆ ಈ ಕಡೆ ಅಲ್ಲಾಡಲಿಲ್ಲ, ಹಾಗೆಯೇ ಗಟ್ಟಿಯಾಗಿ ನಿಂತಿದ್ದೀರಿ.

ಶ್ರೀ ಸಿದ್ದರಾಮಯ್ಯ : ಬಹಳ ದೀರ್ಘವಾಗಿ ನೀವು ಎತ್ತಿದಂಥ ಎಲ್ಲಾ ಆಕ್ಷೇಪಗಳಿಗೂ ನಿಮ್ಮ ಮನಸ್ಸನ್ನು ತಟ್ಟುವ ರೀತಿಯಲ್ಲಿ ಉತ್ತರಿಸಿದ್ದೇನೆ. ನಿಮಗೆಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಉತ್ತರಿಸಿದ್ದೇನೆ. ಸುಮಾರು ಮೂರು ಗಂಟೆಗಳಷ್ಟು ಕಾಲ ದೀರ್ಘವಾಗಿ ಉತ್ತರಿಸಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ : ಹಿಂದೆ ನಾವೆಲ್ಲರೂ ಹಿಸ್ಟರಿ ಪೇಪರ್ ಬರೆಯುತ್ತಿದ್ದೆವು. ಎಷ್ಟು ಪುಟಗಳನ್ನು ಬರೆದೆವು ಎಂಬುದು ಮುಖ್ಯವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಹಿಸ್ಟರಿ ಎಷ್ಟು ಬೇಕಾದರೂ ಬರೆದುಕೊಳ್ಳಿ. ನಿಮಗೆ ಎಷ್ಟು ಮಾರ್ಕ್ಸ್ ಬಂತೆಂಬುದನ್ನು ಹೇಳಿ. ನಮಗೆ ಇಲ್ಲಿ ಮಾರ್ಕ್ಸ್ ಸಿಕ್ಕಿದೆಯಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಶ್ನೆ ಇಡುವುದು ನಾವು, ನೀವು ಉತ್ತರ ಬರೆಯಿರಿ. ಅವೊತ್ತು ನೀವು ಪಾಸಿಂಗ್ ಮಾಕ್ಸ್ ಸಹ ತೆಗೆದುಕೊಳ್ಳಲಿಲ್ಲ! ಪ್ರಶ್ನೆಗಳು ನಮ್ಮದು, ನೀವು ಉತ್ತರ ಕೊಟ್ಟಿರಿ. ಅದಕ್ಕೆ ನಾವು ಪಾಸಿಂಗ್ ಮಾರ್ಕ್ಸ್ ಕೂಡ ಕೊಡಲಿಲ್ಲ.

ಶ್ರೀ ಸಿದ್ದರಾಮಯ್ಯ : ನಿಮ್ಮಲ್ಲಿ ನನ್ನ ಮನವಿ ಏನೆಂದರೆ, ವಿಧಾನ ಪರಿಷತ್ತಿನ ಅಧಿವೇಶನ ಇವೊತ್ತೇ ಮುಗಿಯುವ ಸಾಧ್ಯತೆಯಿದೆ. ಇವೊತ್ತೇ ಅಲ್ಲಿ ಅಧಿವೇಶನದ ಕಲಾಪ ಮುಗಿಸುತ್ತಿರುವುದರಿಂದ ಈ ಪೂರಕ ಅಂದಾಜುಗಳು ಮತ್ತೆ ವಿಧಾನ ಪರಿಷತ್ತಿಗೆ ಹೋಗಬೇಕು. ವಿಧಾನ ಪರಿಷತ್ತಿನ ಕಲಾಪ ಇವೊತ್ತು ಮುಗಿಯುತ್ತಿರುವುದಾಗಿ ಅಲ್ಲಿನ ಸಭಾನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆಯವರು ನಿನ್ನೆ ನನಗೆ ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಲಾಪವನ್ನು 6ನೇ ತಾರೀಖಿನವರೆಗೂ ಮುಂದುವರೆಸಬೇಕೆಂದು ನಾವು ಅಲ್ಲಿಗೆ ಹೋಗಿ ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ : ನಿಮಗೆ ಆ ಕಷ್ಟ ಕೊಡುವುದಕ್ಕಾಗುವುದಿಲ್ಲ. ಅಧ್ಯಕ್ಷರೆ, ಭೋಜನ ವಿರಾಮವಾದ ಬಳಿಕ ಪೂರಕ ಅಂದಾಜುಗಳನ್ನು ಚರ್ಚೆಗೆ ತೆಗೆದುಕೊಳ್ಳಿ. ಏನೇನು ಚರ್ಚೆ ಮಾಡಬೇಕೋ, ಏನೇನು ಹೇಳಬೇಕೆಂದಿದ್ದೀರೋ ಅವೆಲ್ಲವನ್ನೂ ಅರ್ಧ ಗಂಟೆ ಓದಿಕೊಂಡು ಬಂದು ಅನಂತರ ಹೇಳಿ.

ಶ್ರೀ ಆರಗ ಜ್ಞಾನೇಂದ್ರ : ಹಿಂದೆ ವಿಷಯ ಸಮಿತಿಗಳನ್ನು ರಚಿಸಲಾಗುತ್ತಿತ್ತು. ಆಯವ್ಯಯಕ್ಕೆ ಸಂಬಂಧಿಸಿದಂತೆ ವಿಷಯ ಸಮಿತಿಗಳಲ್ಲಿ ಬಹಳ ವಿಸ್ತೃತವಾಗಿ ಇಲಾಖಾವಾರು ಬೇಡಿಕೆಗಳ ಬಗ್ಗೆ ಚರ್ಚೆಯಾಗುತ್ತಿತ್ತು. ಈ ಸಲ ನಾವು ಇಲ್ಲಿಯೇ ಕುಳಿತುಕೊಂಡು haphazard ಆಗಿ ಏನೇನೋ ಮಾಡಿ 'ಸುದೀರ್ಘವಾಗಿ ಚರ್ಚೆ ನಡೆದಿದೆ' ಯೆಂದು ತಾವು ಹೇಳಿದಿರಲ್ಲಾ, ಒಂದೂ ಇಲಾಖೆಯ ಬಗ್ಗೆ ಚರ್ಚೆ ನಡೆಯಲಿಲ್ಲ. ಇವೊತ್ತು ಬೆಳಿಗ್ಗೆ ಇವರು ಪೂರಕ ಅಂದಾಜುಗಳಿಗೆ ಸಂಬಂಧಿಸಿದ ಈ ಪೇಪರ್ ಕೊಟ್ಟರು. ಈ ತಕ್ಷಣದಲ್ಲಿ ಚರ್ಚೆ ಮಾಡಲು ನಾವೇನೂ ದೈವಾಂಶ ಸಂಭೂತರೇ? ಇದರ ಬಗ್ಗೆ ಸ್ವಲ್ಪ ಓದಬೇಕು. ಯಾವ ಹೆಡ್‌ನಲ್ಲಿ ಕೊಟ್ಟಿದ್ದೀರಿ? ಏನು ಮಾಡಿದ್ದೀರಿ ಎಂಬುದನ್ನೆಲ್ಲಾ ಹೇಳಬೇಕಾಗುತ್ತದೆ. ಈ ಒಂದು ದಿವಸವಾದರೂ ಚರ್ಚೆಗೆ ಅವಕಾಶ ಕೊಡದಿದ್ದರೆ ಹೇಗೆ? ಅಧ್ಯಕ್ಷರೆ, ಅವರನ್ನು ಕೋ–ಆಪರೇಟ್ ಮಾಡುವುದಕ್ಕೆ ಹೇಳಿ. ಮೊನ್ನೆ ತಾನೇ ಅವರಿಗೆ ನಾವು ಬಜೆಟ್ ಪಾಸ್ ಮಾಡಿಕೊಟ್ಟಿದ್ದೇವೆ.

ಅಧ್ಯಕ್ಷರು : ಯಡಿಯೂರಪ್ಪನವರೆ, ವಿಧಾನ ಪರಿಷತ್ತಿನ ಕಲಾಪವನ್ನು ಮುಂದೂಡುವುದರಿಂದ, ಇಲ್ಲಿ ಪಾಸ್ ಮಾಡಿ ಅಲ್ಲಿಗೆ ಕಳುಹಿಸಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ದಿವಸ ಕಳುಹಿಸೋಣ.

ಅಧ್ಯಕ್ಷರು : ನೀವು ಕಳುಹಿಸುತ್ತೀರಿ. ಆದರೆ, ವಿಧಾನ ಪರಿಷತ್ತಿನ ಅಧಿವೇಶನ ಇರಬೇಕಲ್ಲಾ. ವಿಧಾನ ಪರಿಷತ್ತಿನ ಕಲಾಪವನ್ನು ಮಂದೂಡಿದರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ವಿಷಯದಲ್ಲಿ ಇಷ್ಟೊಂದು ಚರ್ಚೆಯಾಗುವುದು ನಮಗೆ ಒಂದು ರೀತಿ ಮುಜುಗರ ಉಂಟುಮಾಡುವಂಥಾದ್ದಾಗಿದೆ.

ಅಧ್ಯಕ್ಷರು : ಚರ್ಚೆಗೆ ನಾನು ಅಡ್ಡಿಪಡಿಸುವುದಿಲ್ಲ. ಚರ್ಚೆಯಾಗಬೇಕು.

ಶ್ರೀ ಹೆಚ್.ಡಿ. ಬಸವರಾಜು : ಅಧ್ಯಕ್ಷರೆ, ತಮ್ಮಲ್ಲಿ ನಾನು ಒಂದು ಸಲಹೆ ಕೇಳುತ್ತಿದ್ದೇನೆ. ಈ ಪೂರಕ ಅಂದಾಜುಗಳನ್ನು ತಯಾರಿಸಲು ಎಷ್ಟು ಸಮಯ ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳಿ. ಇದನ್ನು ಅರ್ಧ ಗಂಟೆಯಲ್ಲಿ ಓದಿ ನಾವು ಚರ್ಚೆ ಮಾಡಬೇಕೆಂದು ತಾವು ಹೇಳುತ್ತೀರಾ? ಇದು ಸಮಂಜಸವೇ? ದಯವಿಟ್ಟು ಹೇಳೀ. ಇದನ್ನು ತಯಾರಿಸುವುದಕ್ಕೆ ತಾವು (ಹಣಕಾಸು ಸಚಿವರು) ಎಷ್ಟು ಸಮಯ ತೆಗೆದುಕೊಂಡಿದ್ದೀರಿ? ಅರ್ಧ ಗಂಟೆಯಲ್ಲಿ ಓದಿ ಚರ್ಚೆ ಮಾಡಬೇಕೆಂದರೆ ಎಷ್ಟರಮಟ್ಟಿಗೆ ಇದು ಸಮಂಜಸವಾಗುತ್ತದೆ? ಎಷ್ಟರಮಟ್ಟಿಗೆ ಈ ರಾಜ್ಯದ ಜನರಿಗೆ ನ್ಯಾಯ ದೊರಕಿಸಿಕೊಡುವುದಕ್ಕಾಗುತ್ತದೆ?

ಶ್ರೀ ಸಿದ್ದರಾಮಯ್ಯ : ಯಡಿಯೂರಪ್ಪನವರೆ, ಪೂರಕ ಅಂದಾಜು ಮೇಲೆ ಯಾವಾಗ ಬಹಳ ದೊಡ್ಡ ಚರ್ಚೆಯಾಗಿದೆ? ಹೇಳಿ.

ಶ್ರೀ ಬಿ.ಎಸ್. ಯೆಡಿಯೂರಪ್ಪ : ಇದರ ಬಗ್ಗೆ 3–4 ಗಂಟೆಗಳಷ್ಟು ಕಾಲ ಚರ್ಚೆಯಾಗಿರುವುದು ದಾಖಲೆಯಲ್ಲಿದೆ, ಬೇಕಾದರೆ ನಿಮಗೆ ಒದಗಿಸಿಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಸದಸ್ಯರುಗಳು 5–5 ನಿಮಿಷಗಳ ಕಾಲ ಮಾತನಾಡಿದ್ದನ್ನು ನೋಡಿದ್ದೇವೆ. ಬಹಳ ದೀರ್ಘವಾಗಿ ಚರ್ಚೆ ನಡೆದ ಉದಾಹರಣೆ ನನಗಂತೂ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸಿದ್ದರಾಮಯ್ಯನವರೆ, ಚರ್ಚೆಯಾಗಿದೆ.

ಶ್ರೀ ಸಿದ್ದರಾಮಯ್ಯ : ಚರ್ಚೆಯಾಗಿದೆ. ಆದರೆ, ಗಂಟೆಗಟ್ಟಿಲೆ ಚರ್ಚೆಯಾಗಿದೆಯೇ?

ಶ್ರೀ ವಾಟಾಳ್ ನಾಗರಾಜ್ : ಗಂಟೆಗಟ್ಟಲೆ ಬೇಡ. ನಾವು 5–5 ನಿಮಿಷ ಚರ್ಚೆ ಮಾಡೋಣ ಬಿಡಿ. ಆಗಬಹುದೇ?

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರೆ, ಇದನ್ನು ಮಧ್ಯಾಹ್ನ ತೆಗೆದುಕೊಳ್ಳಿ.

ಅಧ್ಯಕ್ಷರು : ಮಧ್ಯಾಹ್ನ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ಮಧ್ಯಾಹ್ನ 3–4 ಗಂಟೆಗೆ ಚರ್ಚೆಯಾಗಲಿ.

ಶ್ರೀ ವಾಟಾಳ್ ನಾಗರಾಜ್ : ಇವೊತ್ತು ಚರ್ಚಿಸಲು ಬೇರೆ ಬೇರೆ ವಿಷಯಗಳಿವೆ. ನಿಯಮ 69ರಡಿ ಚರ್ಚೆಯಾಗಬೇಕಾದ ಎರಡು ಪ್ರಮುಖ ವಿಷಯಗಳಿವೆ.

ಅಧ್ಯಕ್ಷರು : ಈಗ ಪೂರಕ ಅಂದಾಜುಗಳ ಮೇಲಿನ ಚರ್ಚೆಯನ್ನು ನಾಲ್ಕು ಗಂಟೆಗೆ ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ವಿತ್ತೀಯ ಸಮಸ್ಯೆಗಳು ಬಂದಾಗ ನೀವೆಲ್ಲರೂ ಏಕೆ ಹೀಗಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಛೇ, ಛೇ, ಎಲ್ಲಾದರೂ ಉಂಟೇ? ನೀವು ಕೇಳಿದಂತೆ 30ನೇ ತಾರೀಖು ಬೆಳಿಗ್ಗೆ ನಾವು ಪಾಸ್ ಮಾಡಿಕೊಟ್ಟಿದ್ದೇವೆ. ನೀವು ಹೇಳಿದಂತೆಲ್ಲಾ ಕೇಳಿದ್ದೇವೆ. ನೀವು ಇಷ್ಟು ಹಟ ಹಿಡಿಯುತ್ತಿರುವುದು ಏಕೆಂಬುದು ನನಗೆ ಗೊತ್ತಿಲ್ಲ.

ಅಧ್ಯಕ್ಷರು : ನಮ್ಮ ಅರ್ಥ ಸಚಿವರ ಭಯ ಏನೆಂದರೆ, ಪರಿಷತ್ತು ಇಂದು ಅನಿರ್ದಿಷ್ಟಾವಧಿಗೆ ಮುಂದೂಡುತ್ತಿದ್ದಾರೆ, ಆ ಕಾರಣದಿಂದ ಅವರು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಎರಡು ಗಂಟೆಗೆ ಬಿಸ್‌ನೆಸ್ ಅಡ್ವೈಸರಿ ಕಮಿಟಿ ಕರೆದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಬಗ್ಗೆ ಚರ್ಚೆಮಾಡಿ ಅಲ್ಲಿ ತೀರ್ಮನ ತೆಗೆದುಕೊಳ್ಳೋಣ.

ಅಧ್ಯಕ್ಷರು : ಆಯಿತು ಅಲ್ಲಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳೋಣ. ಈಗ ಮುಂದಕ್ಕೆ ಹೋಗೋಣ.

ಶ್ರೀ ಎಂ.ಪಿ. ರೇಣುಕಾಚಾರ್ಯ(ಹೊನ್ನಾಳಿ) : ಮಾನ್ಯ ಅಧ್ಯಕ್ಷರೆ, ನಾವು ಹೊಸ ಶಾಸಕರು ಸದನಕ್ಕೆ ಬಂದಿದ್ದೇವೆ, ಸದನದಲ್ಲಿ ನಮಗೆ ಅವಕಾಶವೇ ಸಿಗುತ್ತಿಲ್ಲ, ಇಲ್ಲಿಗೆ ನಾವು ಬರುವ ಅವಶ್ಯಕತೆ ಆದರೂ ಏನಿದೆ ಎಂದು ನಾನು ತಮಗೆ ಕೇಳುತ್ತೇನೆ. ಸದನ ಕೆಲವರಿಗೇ ಗುತ್ತಿಗೆ ಆದರೆ, ನಮ್ಮ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳಿವೆ, ನಾವು ಪ್ರಶ್ನೆ ಕೇಳುತ್ತಿದ್ದೇವೆ, ನೀವು ನಮಗೆ ಅವಕಾಶ ಕೊಡುತ್ತಿಲ್ಲ.

ಅಧ್ಯಕ್ಷರು : ನೀವು ಏನು ಕಳುಹಿಸಿದ್ದಿರಿ ಅದರ ಬಗ್ಗೆ ನಾನು ನಿಮಗೆ ನಾಳೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಂಡಿದ್ದೇವೆ, ನೀರಾವರಿ ವಿಷಯಗಳ ಮೇಲೆ ನಾವು ಒಂದು ದಿವಸ ಚರ್ಚೆ ಮಡುವವರಿದ್ದೇವೆ. ಎಲ್ಲರಿಗೂ ಅವಕಾಶ ತೆಗೆದುಕೊಂಡು, ಆ ಕಡೆ ಈ ಕಡೆ ಇರುವವರು ನೀರಾವರಿ ಬಗ್ಗೆ ಒಂದು ನೋಟಿಸ್ ಕಳುಹಿಸಿ ಎಲ್ಲರೂ ಚರ್ಚೆ ಮಾಡೋಣ. ಶೂನ್ಯ ವೇಳೆಯಲ್ಲಿ ಅದನ್ನು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ನೀವು ಇಟ್ಟುಕೊಂಡಿರಿ ನಾಳೆ ಅದಕ್ಕೆ ಅವಕಾಶ ಸಿಕ್ಕಾಗ ಚರ್ಚೆ ಮಾಡಿ ಅದಕ್ಕೆ ಪರಿಹಾರ ಕಂಡುಕೊಳ್ಳೋಣ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಭಾಗ್ಯ ಜ್ಯೋತಿ ವಿಷಯ 29ನೇ ತಾರೀಖು ಇದೆ ಎಂದು ಹೇಳಿದ್ದರು, ಇವತ್ತಿನವರೆಗೂ ನನಗೆ ಅವಕಾಶ ಸಿಗುತ್ತಿಲ್ಲ. ಭಾಗ್ಯಜ್ಯೋತಿಯದ್ದೂ ಇದೆ, ನೀರಾವರಿದ್ದೂ ಇದೆ.

ಅಧ್ಯಕ್ಷರು : ನೂತನವಾಗಿ ಆಯ್ಕೆಯಾದ ಸದಸ್ಯರಿಗೆ ಬಜೆಟ್ ಮೇಲೆ ಮಾತನಾಡುವುದಕ್ಕೆ ಅಪಾರವಾದ ಅವಕಾಶ ಮಾಡಿಕೊಟ್ಟಿದ್ದೇನೆ. ನೀವು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಶೂನ್ಯ ವೇಳೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದೇನೆ. ನೀವು ಈ ತರಹ ಮಾಡಿದರೆ ಹೇಗೆ? ದಯಮಾಡಿ ಸಹಕರಿಸಿ. ನಾಳೆ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಕೂತುಕೊಳ್ಳಿ.